ದಿನಾಂಕ : DATE : 1/7/2020
NAME OF THE NEWS PAPER: ವಿಜಯವಾಣಿ

# ಕರೊನಾ ಚಿಕಿತ್ಸೆಗೆ 4500 ಖಾಸಗಿ ಹಾಸಿಗೆ

## ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರ ಜತೆ ಸಿಎಂ ಸಭೆ ಫಲಪ್ರದ | ವೈದ್ಯಕೀಯ ಸಿಬ್ಬಂದಿಗೆ ವಿಮೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಖಾಸಗಿ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರ ಜತೆ ಸಿಎಂ ಬಿ.ಎಸ್. ಯಡಿಯೂರಪ್ಪ ನಡೆಸಿದ ಸಭೆ ಫಲಪ್ರದವಾಗಿದ್ದು, 4,500 ಹಾಸಿಗೆಗಳು ಲಭಿಸಲಿವೆ.

ಸಭೆ ಬಳಿಕ ಸಿಎಂ ಯಡಿಯೂರಪ್ಪ ಮಾತನಾಡಿ, ಖಾಸಗಿ ಆಸ್ಪತ್ರೆಗಳು ಹಂತ ಹಂತವಾಗಿ 4,500 ಹಾಸಿಗೆಗಳನ್ನು ಕರೊನಾ ಚಿಕಿತ್ಸೆಗೆ ನೀಡಲು ಒಪ್ಪಿವೆ. ಮೊದಲ ಹಂತದಲ್ಲಿ 2,200 ಹಾಸಿಗೆ ನೀಡಲಿವೆ ಎಂದರು.

ಕರೊನಾ ಚಿಕಿತ್ಸೆ ನೀಡುವ ಖಾಸಗಿ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿಗೂ ವಿಮಾ ಸೌಲಭ್ಯ ಕಲ್ಪಿಸಲಾಗುವುದು. ಖಾಸಗಿ ಆಸ್ಪತ್ರೆಗಳ ಜತೆ ಸಮನ್ವಯ ಸಾಧಿಸಲು ಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದರು.

ಬೆಂಗಳೂರಿನಲ್ಲಿ 2 ಸರ್ಕಾರಿ ಸಂಸ್ಥೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದ್ದು, ನಗರದ 11 ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ 2200 ಹಾಸಿಗೆಗಳನ್ನು ಅಧಿಸೂಚಿಸಲಾಗಿದೆ. ಆದರೆ, ಪ್ರಸ್ತುತ ಪ್ರಕರಣಗಳ ಏರಿಕೆ ಗಮನಿಸಿದರೆ 4,500 ಹಾಸಿಗೆಗಳನ್ನು ಖಾಸಗಿ ಕಾಲೇಜುಗಳಿಂದ ಪಡೆಯುವ ಅವಶ್ಯಕತೆ ಇದೆ. ನಾಲ್ಕು ತಿಂಗಳಿಂದ ಹತ್ತು ವೈದ್ಯಕೀಯ ಕಾಲೇಜುಗಳು ಹೊರತುಪಡಿಸಿ ಇತರ ಎಲ್ಲ ಕಾಲೇಜುಗಳು ಲ್ಯಾಬ್ ವ್ಯವಸ್ಥೆ ಮಾಡಿವೆ. ಸರ್ಕಾರಿ ಕಾಲೇಜುಗಳಲ್ಲಿ 2 ಸಾವಿರ, ಖಾಸಗಿ ಆಸ್ಪತ್ರೆಗಳಲ್ಲಿ 4,500 ಸೇರಿ 6,500 ಹಾಸಿಗೆಗಳು ಬೆಂಗಳೂರಿನ ವೈದ್ಯಕೀಯ ಕಾಲೇಜುಗಳಲ್ಲೇ ಲಭಿಸಲಿವೆ. ವೈದ್ಯಕೀಯ ಕಾಲೇಜುಗಳು ಸರ್ಕಾರದ ಜತೆ ಕೈಜೋಡಿಸಿ, ಕರೊನಾ ಚಿಕಿತ್ಸೆಗೆ ಸಹಕರಿಸುವ ಭರವಸೆ ನೀಡಿವೆ ಎಂದರು.



### ಬೆಡ್‌ಗೂ ಡೆತ್‌ಗೂ ಸಂಬಂಧವಿಲ್ಲ

**ಯಾರೋ ಒಬ್ಬರು ಸತ್ತಿದ್ದಕ್ಕೂ ಆಸ್ಪತ್ರೆಯಲ್ಲಿ ಹಾಸಿಗೆ ಇಲ್ಲದ್ದಕ್ಕೂ ಸಂಬಂಧ ಕಲ್ಪಿಸುವುದು ಸರಿಯಲ್ಲ ಎಂದು ಸಿಎಂ ಸ್ಪಷ್ಟಪಡಿಸಿದ್ದಾರೆ. ಕೆಲ ಆಸ್ಪತ್ರೆಗಳಿಗೆ ಅಲೆದು ಹಾಸಿಗೆ ಸಿಗದೆ ಒಬ್ಬರು ಮೃತಪಟ್ಟಿದ್ದಕ್ಕೆ ಪ್ರತಿಕ್ರಿಯಿಸಿದ ಅವರು, ಕರೊನಾ ನಿಯಂತ್ರಣಕ್ಕೆ ಸರ್ಕಾರ ಶಕ್ತಿ ಮೀರಿ ಶ್ರಮಿಸುತ್ತಿದ್ದು, ಸಾರ್ವಜನಿಕರೂ ಸಹಕರಿಸಬೇಕು ಎಂದು ಮನವಿ ಮಾಡಿಕೊಂಡರು.**

ಹಾಸಿಗೆ ಹಂಚಿಕೆ ಬಗ್ಗೆ ಬಿಬಿಎಂಪಿಯಲ್ಲಿ ಕೇಂದ್ರೀಕೃತ ವ್ಯವಸ್ಥೆ ಮಾಡಲಾಗಿದ್ದು, 2-3 ದಿನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿದೆ. ಕರೊನಾ ಚಿಕಿತ್ಸೆಯ ಎಲ್ಲ ಆಸ್ಪತ್ರೆ ಈ ವ್ಯವಸ್ಥೆ ವ್ಯಾಪ್ತಿಗೆ ತರಲಾಗುವುದು. ಕರೊನಾ ಕೇರ್ ಸೆಂಟರ್‌ಗಳಿಗೆ ಅಗತ್ಯ ಸಿಬ್ಬಂದಿ ಒದಗಿಸುವಂತೆ ಖಾಸಗಿ ಆಸ್ಪತ್ರೆ ಮುಖ್ಯಸ್ಥರಲ್ಲಿ ಸಿಎಂ ಮನವಿ ಮಾಡಿದರು.

### ಮಾರ್ಗಸೂಚಿ ಬದಲು

**ಕರೊನಾ ಕೇರ್ ಸೆಂಟರ್‌ಗಳಲ್ಲಿ ಕರ್ತವ್ಯ ನಿರ್ವಹಿಸಲು ಖಾಸಗಿ ಕಾಲೇಜು ಪಿಜಿ ವಿದ್ಯಾರ್ಥಿಗಳು ಮತ್ತು ಇತರ ಸಿಬ್ಬಂದಿಯನ್ನೂ ಬಳಸಿಕೊಳ್ಳಲಾಗುವುದು ಎಂದು ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ. ಮಂಗಳವಾರ ಖಾಸಗಿ ವೈದ್ಯಕೀಯ ಕಾಲೇಜುಗಳ ಜತೆ ಪ್ರತ್ಯೇಕ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು. ಇನ್ನು ಮುಂದೆ ಕರೊನಾ ಚಿಕಿತ್ಸೆ ವಿಧಿ-ವಿಧಾನಗಳಲ್ಲೂ ಕೆಲ ಬದಲಾವಣೆಗಳನ್ನು ಮಾಡಲಾಗುತ್ತಿದೆ. ಈ ಎಲ್ಲ ಮಾಹಿತಿ ಇರುವ ಚಿಕಿತ್ಸಾ ವಿಧಿ-ವಿಧಾನಗಳ ಮಾರ್ಗಸೂಚಿ ಬುಧವಾರ ಬಿಡುಗಡೆ ಮಾಡಲಾಗುವುದು ಎಂದರು.**

**ಮುಖ್ಯಮಂತ್ರಿ ...**

**ಬೆಂಗಳೂರಿನಲ್ಲಿ ಕರೊನಾ ಅಬ್ಬರಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಲಾಕ್‌ಡೌನ್ ಮಾಡಬೇಕೇ ಅಥವಾ ಸೀಲ್‌ಡೌನ್ ಸಾಕೇ ಎಂಬ ನಿರ್ಧಾರವನ್ನು ಸಿಎಂ ಕೈಗೊಳ್ಳಲಿದ್ದಾರೆ ಎಂದು ಸಚಿವ ಆರ್. ಅಶೋಕ್ ಸ್ಪಷ್ಟಪಡಿಸಿದ್ದಾರೆ. ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಿಎಂ ದಿನಾ ಸಭೆ ನಡೆಸುತ್ತಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿದ ಕೂಡಲೇ ಬಿಗಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.**

### ಸಚಿವರಿಬ್ಬರ ಕಿತ್ತಾಟ ಮುಂದುವರಿಕೆ

**ಬೆಂಗಳೂರು:** ಕರೊನಾ ನಿರ್ವಹಣೆ ವಿಚಾರದಲ್ಲಿ ಮಾರ್ಚ್ 23ರಿಂದ ಈಚೆಗೆ ಸರ್ಕಾರದಲ್ಲಿ ಶೀತಲ ಸಮರ ಮುಂದುವರಿದಿದೆ. ಮಂಗಳವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಖಾಸಗಿ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರ ಸಭೆಯ ಮಾಹಿತಿ ನೀಡಲು ಸಚಿವದ್ವಯರಲ್ಲಿ ಪೈಪೋಟಿ ನಡೆಯಿತು. ಈ ಸಭೆ ಬಳಿಕ ಸಿಎಂ ಮಾಧ್ಯಮಗಳ ಮುಂದೆ ಹಾಜರಾದಾಗ ಸುಧಾಕರ್ ಪಕ್ಕ ನಿಂತುಕೊಂಡರು, ಮತ್ತೊಂದೆಡೆ ಬಸವರಾಜ ಬೊಮ್ಮಾಯಿ ಇದ್ದರು. ಮಾಧ್ಯಮಗಳಿಗೆ ವಿವರಿಸಿ ಸಿಎಂ ಹೊರಟರು. ಸುಧಾಕರ್ 2 ಹೆಜ್ಜೆ ಹೋದಂತೆ ಮಾಡಿ ಪುನಃ ಮಾಧ್ಯಮಗಳ ಮುಂದೆ ಹಾಜರಾಗಿ ಉಳಿದ ವಿವರಣೆ ಕೊಡಲಾರಂಭಿಸಿದರು. ಇದನ್ನು ನಿರೀಕ್ಷಿಸದ ಆರ್. ಅಶೋಕ್ ಅಲ್ಲಿಂದ ನಿರ್ಗಮಿಸಿದರು.

**» ಸುಧಾಕರ್ ಅಶೋಕ್ ಪೈಪೋಟಿ**

ಇದಕ್ಕೂ ಮುನ್ನ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸುಧಾಕರ್, ನಾನು ಪೋರ್ಟ್ ಫೋಲಿಯೊ ಮಿನಿಸ್ಟರ್, ಕಂದಾಯ ಸಚಿವರು ನನ್ನ ಅನುಪಸ್ಥಿತಿಯಲ್ಲಿ ಬಹಳ ಚೆನ್ನಾಗಿ ನಿರ್ವಹಿಸಿದ್ದರು. ಕ್ವಾರಂಟೈನ್ ಮುಗಿಸಿ ಬಂದಿರುವುದರಿಂದ ನಾನೇ ಉಸ್ತುವಾರಿ. ಸಿಎಂ ನಮ್ಮ ಕ್ಯಾಪ್ಟನ್, ಅವರು ಹೇಳಿದಂತೆ ರಾಜಕೀಯ ಮಾಡದೆ ಕೆಲಸ ನಿರ್ವಹಿಸುತ್ತೇವೆ ಎಂದರು.



**ಲಾಕ್‌ಡೌನ್ ಮಾಡಿದರೆ ಬಡವರಿಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ರಾಜ್ಯದಲ್ಲಿ ನೂರಕ್ಕೆ ನೂರರಷ್ಟು ಲಾಕ್‌ಡೌನ್ ಮಾಡುವ ಪರಿಸ್ಥಿತಿ ಇಲ್ಲ. ಆದರೆ ಜುಲೈ 7ರಿಂದ ಕೆಲವು ಕಠಿಣ ನಿಯಮಗಳು ಜಾರಿಯಾಗಲಿವೆ.**

| ಆರ್. ಅಶೋಕ್ ಕಂದಾಯ ಸಚಿವ